ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ	:	425(527)
ಸದಸ್ಯರ ಹೆಸರು	:	ಶ್ರೀ ಮರಿತಿಬ್ಬೇಗೌಡ(ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ	:	09/03/2020.
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ತುಮಕೂರು ಜಿಲ್ಲೆ, ಚಿಕ್ಕನಾಯಕನ ಹಳ್ಳಿ ತಾಲ್ಲೂಕು ದೇಶೀಯ ವಿದ್ಯಾಪೀಠ ಬಾಲಕರ ಪ್ರೌಢಶಾಲೆ ಈ ಸಂಸ್ಥೆಯ ಮುಖ್ಯೋಪಾಧ್ಯಾಯರ ಹುದ್ದೆಗೆ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ;	ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇಲ್ಲಿ ಪ್ರಸ್ತಾವನೆ ಸ್ವೀಕೃತವಾಗಿರುತ್ತದೆ.
ಆ)	ಪ್ರಸ್ತಾವನೆ ಸಲ್ಲಿಸಿದ್ದಲ್ಲಿ, ಅನುಮೋದನೆ ನೀಡಲಾಗಿದೆಯೇ; ನೀಡದೇ ಇದ್ದಲ್ಲಿ ಯಾವ ಕಾರಣಕ್ಕೆ ಪ್ರಸ್ತಾವನೆಯನ್ನು ವಿಲೆ(ಬಾಕಿ) ಇಡಲಾಗಿದೆ;	ಈ ಕೆಳಕಂಡ ಕಾರಣಗಳಿಂದಾಗಿ ಅನುಮೋದನೆಯಾಗಿರುವುದಿಲ್ಲ. ➢ ಶ್ರೀ ಮಲ್ಲಿಕಾರ್ಜುನಯ್ಯ, ಸಹ ಶಿಕ್ಷಕರು ಇವರಿಗೆ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿ ನೀಡಿ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ➢ ಸದರಿ ಆಡಳಿತ ಮಂಡಳಿ ವತಿಯಿಂದ ಎರಡು ಅನುದಾನಿತ ಶಾಲೆಗಳು ನಡೆಯುತ್ತಿರುವುದರಿಂದ ಬಡ್ತಿ ಮೀಸಲಾತಿ ನಿಯಮಗಳು ಅನ್ವಯವಾಗುತ್ತದೆ. ➢ ಶ್ರೀ ರಂಗಸ್ವಾಮಿ, ಸಹ ಶಿಕ್ಷಕರು ಇವರು ಪರಿಶಿಷ್ಟ ಜಾತಿ ಬ್ಯಾಕ್‌ಲಾಗ್ ಹುದ್ದೆ ಎಂದು ಪರಿಗಣಿಸಿ ಬಡ್ತಿ ನೀಡುವಂತೆ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಆಯೋಗದಲ್ಲಿ ಪ್ರಕರಣ ಸಂಖ್ಯೆ: 346/2015 ರಲ್ಲಿ ಪ್ರಕರಣ ದಾಖಲಿಸಿರುತ್ತಾರೆ. ಆಯೋಗದಿಂದ ತೀರ್ಪು ಬಂದಿರುವುದಿಲ್ಲ. ➢ ಶ್ರೀ ಮಲ್ಲಿಕಾರ್ಜುನಯ್ಯ, ಸಹ ಶಿಕ್ಷಕರು, ದೇಶೀಯ ವಿದ್ಯಾಪೀಠ ಬಾಲಕರ ಪ್ರೌಢಶಾಲೆ ಇವರ ಬಡ್ತಿಯ ವಿಚಾರ ಕುರಿತು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಮುಂದೆ 23/2015ರಲ್ಲಿ ಪ್ರಕರಣ ದಾಖಲಿಸಿದ್ದು, ದಿನಾಂಕ: 22-01-2016 ರಲ್ಲಿ ಮೇಲ್ಮನವಿ ಪ್ರಾಧಿಕಾರಿಗಳು ಸದರಿ ಅರ್ಜಿಯನ್ನು ತಿರಸ್ಕರಿಸಿರುತ್ತಾರೆ. ➢ ಶ್ರೀ ಮಲ್ಲಿಕಾರ್ಜುನಯ್ಯ. ಸ.ಶಿ, ದೇಶೀಯ ವಿದ್ಯಾಪೀಠ ಬಾಲಕರ ಪ್ರೌಢಶಾಲೆ, ಚಿಕ್ಕನಾಯಕನಹಳ್ಳಿ, ಇವರು ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ : 12295/2016ರಲ್ಲಿ ದಾವೆ ದಾಖಲಿಸಿರುತ್ತಾರೆ. ನ್ಯಾಯಾಲಯದಲ್ಲಿ ಪ್ರಕರಣವು ವಿಚಾರಣಾ

		ಹಂತದಲ್ಲಿರುತ್ತದೆ. ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಮತ್ತು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಆಯೋಗದಲ್ಲಿ ಪ್ರಕರಣ ಬಾಕಿ ಇದ್ದುದರಿಂದ ಬಡ್ತಿ ನೀಡದೇ ಆಯುಕ್ತಾಲಯದ ಕಛೇರಿ ಪತ್ರ ದಿನಾಂಕ: 05-06-2018ರಲ್ಲಿ ಪ್ರಸ್ತಾವನೆಯನ್ನು ಹಿಂದಿರುಗಿಸಲಾಗಿರುತ್ತದೆ.
ಇ)	ದೇಶೀಯ ವಿದ್ಯಾಪೀಠ ಸಂಸ್ಥೆಯಲ್ಲಿ ಕಳೆದ 3 ವರ್ಷಗಳಿಂದ ಎಷ್ಟು ಬಾರಿ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದೆ;	ಆಯುಕ್ತರ ಕಛೇರಿಗೆ ಒಂದು ಬಾರಿ ಮತ್ತು ಉಪನಿರ್ದೇಶಕರು(ಆಡಳಿತ)ಸಾ.ಶಿ.ಇಲಾಖೆ ರವರ ಹಂತದಲ್ಲಿ 02 ಬಾರಿ ಪ್ರಸ್ತಾವನೆ ಸಲ್ಲಿಕೆಯಾಗಿರುತ್ತದೆ.
ಈ)	ಅನುಮೋದನೆ ನೀಡದಿದ್ದಲ್ಲಿ ಕಾರಣಗಳೇನು;	ಉಪ ಪ್ರಶ್ನೆ (ಅ) ರಂತೆ
ಉ)	ಯಾವ ಕಾಲಮಿತಿಯಲ್ಲಿ ಅನುಮೋದನೆ ನೀಡಲಾಗುವುದು;	ಉಪ ಪ್ರಶ್ನೆ(ಅ)ರಲ್ಲಿನ ವಿವರಣೆಯನ್ವಯ ಕಾಲಮಿತಿಯ ಪ್ರಶ್ನೆ ಉದ್ಭವಿಸುವುದಿಲ್ಲ.
ಊ)	ಮುಖ್ಯೋಪಾಧ್ಯಾಯರು ಸದರಿ ಹುದ್ದೆಯಿಂದ ಅನುಮೋದನೆಗೊಳ್ಳದೆ ನಿವೃತ್ತಿಯಾದರೆ ಅವರಿಗೆ ವೇತನ ಸೌಲಭ್ಯ ಕಡಿತವಾಗಲಿದ್ದು, ಅದನ್ನು ಸರಿದೂಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?	➢ ಶ್ರೀ ಮಲ್ಲಿಕಾರ್ಜುನಯ್ಯ ಸಹ ಶಿಕ್ಷಕರು, ದೇಶೀಯ ವಿದ್ಯಾಪೀಠ ಬಾಲಕರ ಪ್ರೌಢಶಾಲೆ, ಚಿಕ್ಕನಾಯಕನಹಳ್ಳಿ ಇವರ ಜನ್ಮ ದಿನಾಂಕ: 01-06-1958 ಆಗಿದ್ದು, ದಿನಾಂಕ: 31-05-2018ಕ್ಕೆ ವಯೋ ನಿವೃತ್ತಿ ಹೊಂದಿರುತ್ತಾರೆ. ➢ ಸೇವಾ ನಿರತ ಶಿಕ್ಷಕರಿಗೆ ಆಡಳಿತ ಮಂಡಳಿ ನೀಡಿದ ಬಡ್ತಿಯನ್ನು ಇಲಾಖೆಯಿಂದ ನಿಯಮಾನುಸಾರ ಅನುಮೋದನೆಯಾದ ದಿನಾಂಕದಿಂದ ಮುಖ್ಯ ಶಿಕ್ಷಕರ ಬಡ್ತಿ ವೇತನ ಪಡೆಯಲು ಅರ್ಹರಿರುತ್ತಾರೆ. ಮುಖ್ಯ ಶಿಕ್ಷಕರ ಬಡ್ತಿ ಇಲಾಖೆಯಿಂದ ಅನುಮೋದನೆಗೊಳ್ಳದೆ ನಿವೃತ್ತಿ ಹೊಂದಿದರೆ, ನಿವೃತ್ತಿ ಹೊಂದಿದ ಶಿಕ್ಷಕರಿಗೆ ಸರ್ಕಾರದಿಂದ ಆರ್ಥಿಕ ಸೌಲಭ್ಯಗಳನ್ನು ಸರಿದೂಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ: ಇಪಿ 68 ಎಸ್‌ಇಎಸ್ 2020

(ಎಸ್. ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು.